ರಾಜ್ಯ ವಯಸ್ಕರ ಶಿಕ್ಷಣ ಸಮಿತಿ.

ಚುಕ್ಕೆ ಗುರುತಿಲ್ಲದ ಸಂಖ್ಯೆ: 1057(1116)

ಸದಸ್ಯರ ಹೆಸರು: ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)

ಉತ್ತರಿಸುವ ಸಚಿವರು: ಶ್ರೀ ಬಾಬುರಾವ್ ಚವ್ವಾಣ್(ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಪ್ರಶ್ನೆ

ಅ) ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಯನ್ನು ವಿಸರ್ಜಿಸಲು ಉದ್ದೇಶಿಸಲಾಗಿದೆಯೇ?

ಆ) ಈ ಕ್ರಮಕ್ಕೆ ಬಲವಾದ ಕಾರಣವೇನು?

ಇ) ಈ ಸಮಿತಿಯಲ್ಲಿ ಸುಮಾರು ವರ್ಷಗಳಿಂದ ಅವ್ಯವಹಾರ ನಡೆದಿರುವುದು ನಿಜವೇ; ಯಾವ ರೀತಿ ಅಕ್ರಮ ನಡೆದಿದೆ; ಇದಕ್ಕೆ ಕಾರಣ ಯಾರು; ಇಂತಹವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ?

ಈ) ಈ ಸಮಿತಿಯ ಅಧೀನದಲ್ಲಿದ್ದ ನೌಕರರು ಮತ್ತು ವಿದ್ಯಾಪೀಠಗಳನ್ನು ಯಾರ ನಿರ್ವಹಣೆಗೆ ವಹಿಸಲಾಗುವುದು?

ಉ) ಕಳೆದ ೩ ವರ್ಷಗಳಿಂದ ಇದರ ಅಧ್ಯಕ್ಷರಾಗಿದ್ದವರ ಹೆಸರುಗಳನ್ನು ನೀಡುವುದು?

ಉತ್ತರ

ಅ) ಹೌದು.

ಆ) ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ಇಲ್ಲಿ ಅವ್ಯವಹಾರಗಳು ನಡೆದಿರುವ ಬಗ್ಗೆ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಕೇಂದ್ರ ಸಮಿತಿ ಸದಸ್ಯರ ಒಕ್ಕೂಟ, ಮೈಸೂರು ಸರ್ಕಾರಕ್ಕೆ ಹಾಗೂ ವಿಭಾಗಾಧಿಕಾರಿಗಳು, ಮೈಸೂರು ವಿಭಾಗ, ಮೈಸೂರು ಇವರಿಗೆ ದೂರು ಸಲ್ಲಿಸಿದ್ದರು. ಸದರಿ ದೂರಿನ ಸಂಬಂಧದಲ್ಲಿ ವಿಭಾಗಾಧಿಕಾರಿಗಳು, ಮೈಸೂರು ವಿಭಾಗ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಇವರು, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ನಡೆದಿರುವ ದುರಾಡಳಿತ ಮತ್ತು ಹಣದ ದುರುಪಯೋಗದ ಬಗ್ಗೆ ನೀಡಿರುವ ವರದಿ ಹಾಗೂ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ಇದರ ತಪಾಸಣೆ

ನಡೆಸಲು ಸರ್ಕಾರ ನೇಮಕ ಮಾಡಿದ್ದ ಸಮಿತಿಯು ನೀಡಿದ ವರದಿ ಆಧರಿಸಿ, ಸರ್ಕಾರವು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ಇದನ್ನು ವಿಸರ್ಜನೆ ಮಾಡಿದೆ.

ಇ) ಹೌದು. ದುರಾಡಳಿತ ಮತ್ತು ಹಣಕಾಸಿನ ವಿಷಯದಲ್ಲಿ ಅವ್ಯವಹಾರ ನಡೆದಿದೆ. ಸಮಿತಿಯ ಪದಾಧಿಕಾರಿಗಳು, ಅಧಿಕಾರಿ : ನೌಕರರು ದುರಾಡಳಿತ ಮತ್ತು ಅವ್ಯವಹಾರಕ್ಕೆ ಕಾರಣರು. ಅಧಿಕಾರಿ : ನೌಕರರ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ.

ಈ) ಸಮಿತಿಯ ಅಧೀನದಲ್ಲಿರುವ ವಿದ್ಯಾಪೀಠಗಳ ನಿರ್ವಹಣೆಯನ್ನು ಸಂಬಂಧಿಸಿದ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ನಿರ್ವಹಣೆಗೆ ವಹಿಸಿದೆ. ಸರ್ಕಾರಿ ಆದೇಶ ಸಂಖ್ಯೆ : ಇಡಿ ೫೧ ಇಎಸ್‌ಡಬ್ಲ್ಯೂ ೨೦೦೧(ಭಾಗ), ದಿನಾಂಕ:೨೩.೦೧.೨೦೦೨ರ ಪ್ರಕಾರ, ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ ಇವರನ್ನು ನಿಯಂತ್ರಣಾಧಿಕಾರಿಯನ್ನಾಗಿ ನೇಮಿಸಿದೆ. ವಿಸರ್ಜಿತ ಸಮಿತಿಯ ನೌಕರರ ವೇತನವನ್ನು ವಿತರಿಸುವ ಅಧಿಕಾರ ಉಪನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ ಇವರಿಗೆ ನೀಡಲಾಗಿದೆ.

ಉ) ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ಇದರಲ್ಲಿ ಕಳೆದ ಮೂರು ವರ್ಷಗಳಿಂದ ಅಧ್ಯಕ್ಷರಾಗಿದ್ದವರ ವಿವರಗಳು: ದಿನಾಂಕ:೫.೧೨.೯೭ ರಿಂದ ೨೨.೧೧.೯೯ರವರೆಗೆ ಶ್ರೀ ಕೋಣಂದೂರು ಲಿಂಗಪ್ಪ ದಿನಾಂಕ:೨೩.೧೧.೯೯ರಿಂದ ೨೪.೧೦.೨೦೦೦ ರವರೆಗೆ - ಶ್ರೀ ಜಿ.ಕೆ.ಲೋಕರೆ, ಭಾ.ಆ.ಸೇ. ವಿಭಾಗಾಧಿಕಾರಿ, ಮೈಸೂರು ದಿನಾಂಕ: ೨೫.೧೦.೨೦೦೦ ರಿಂದ ೮.೧೧.೨೦೦೧ ರವರೆಗೆ - ಶ್ರೀ ಹೆಚ್.ಭಾಸ್ಕರ್, ಭಾ.ಆ.ಸೇ., ವಿಭಾಗಾಧಿಕಾರಿ, ಮೈಸೂರು.

ರಾಜ್ಯಾದ್ಯಾಂತ ಗ್ರಾಮ ಪಂಚಾಯಿತಿ ಖಾಲಿ ಇರುವ ಕಾರ್ಯದರ್ಶಿ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. : 1058(1117)

ಸದಸ್ಯರ ಹೆಸರು: ಶ್ರೀ ಆರಗ ಜ್ಞಾನೇಂದ್ರ(ತೀರ್ಥಹಳ್ಳಿ)

ಉತ್ತರಿಸುವವರು : ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)